

‘ಪ್ರಸಾದ ಅಂತ ಅಲ್ಲ, ಶಿರಾ ಅಂತಲಾದ್ರೂ ತಿನ್ನೆ ಚಿಕ್ಕಿ. ನಾನು ಯಾರಿಗೂ ಹೇಳುವುದಿಲ್ಲ’ ಎಂದು ಬೆರಳುಗಳ ಸಂದಿಯಲ್ಲಿ ಜಾರುವಷ್ಟು ತುಪ್ಪವಿದ್ದ ಸತ್ಯನಾರಾಯಣ ಕತೆಯ ಪ್ರಸಾದವನ್ನು ಪಾತಿಚಿಕ್ಕಿಯ ಎದುರಿಗೆ ಹಿಡಿಯುತ್ತ ಕಣ್ಣುಮಿಟುಕಿಸಿದ್ದೆ.

‘ನೋಡು ಕಮಲಿ, ನಾನು ಪ್ರಸಾದ ತೆಗೆದುಕೊಳ್ಳದಿರಲು ಕಾರಣ ಬೇರೆಯೇ ಇದೆ. ಅದನ್ನು ಯಾರಿಗೂ ಪದೇ ಪದೇ ಹೇಳುತ್ತ ತಿರುಗುವುದಿಲ್ಲ. ಭಗವಂತನ ಮೇಲೆ ಭಯ ಭಕ್ತಿ ಇಲ್ಲವೆಂದಲ್ಲ, ಪ್ರಸಾದ ತೆಗೆದುಕೊಂಡೇ ನನ್ನ ಭಕ್ತಿಯನ್ನು ಸಾಬೀತುಪಡಿಸಬೇಕೆಂದೇನಿಲ್ಲವಲ್ಲ. ನೀನು ಯಾರಿಗೆ ಹೇಳ್ತೀಯೋ ಬಿಡ್ತೀಯೋ ಸಂಬಂಧ ಇಲ್ಲ; ಇಲ್ಲಿ ಅಂತಲ್ಲ, ಎಲ್ಲಿಯೇ ಹೋದರೂ ನಾನು ಪ್ರಸಾದಕ್ಕೆ ಕೈ ಹಚ್ಚುವುದಿಲ್ಲ’ ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿದ್ದಳು ಪಾತಿಚಿಕ್ಕಿ.

ಗೃಹಪ್ರವೇಶಕ್ಕಂತೂ ಬರಲಿಲ್ಲ, ಸತ್ಯನಾರಾಯಣ ಕತೆಗಾದರೂ ಬಾ ಅಂತ ಒತ್ತಾಯ ಮಾಡಿದ್ದಕ್ಕೆ